**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 1027/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಜಕಾವುಲ್ಲ | ಸಿ.ಡಬ್ಲ್ಯೂ-05 |
| ತಂದೆ ಹೆಸರು | : | ರಹಮತ್‌ಉಲ್ಲಾ | ಪಿ.ಡಬ್ಲ್ಯೂ-05 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | |
| ವಾಸಸ್ಥಳ | : | ಚಳ್ಳಕೆರೆ | ದಿಃ .27.06.2026 |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

2021 ರಂದು ಬೆಳಿಗ್ಗೆ 09-30 ರಿಂದ 10-00 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-6 ರವರು ಚಾಸಾ-1 ರವರಿಗೆ ಸೇರಿದ ಬೀರು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ 1 ನೇ ಆರೋಪಿ ಮತ್ತು ಇನ್ನೊಬ್ಬರು ಜೆ ಸಿ ಬಿ ವಾಹನವನ್ನು ತಂದು ಗೋಡೆಯನ್ನು ಕೆಡವಿಸಿರುತ್ತಾರೆ. ನಾವು ಕೆಡುವುದನ್ನು ತಡೆಯಲು ಪ್ರಯತ್ನಿಸಿದರು ಗೋಡೆಯನ್ನು ಕೆಡವಿರುತ್ತಾರೆ. ನಮ್ಮ ರೈಟರ್ ಚಿಕ್ಕಣ್ಣ ರವರು ಚಾಸಾ-1 ರವರಿಗೆ ದೂರವಾಣಿ ಕರೆ ಮಾಡಿ ವಿಚಾರವನ್ನು ತಿಳಿಸಿರುತ್ತಾರೆ. ಆಗ ಚಾಸಾ-1 ಮತ್ತು 4 ರವರು ಬೈಕಿನಲ್ಲಿ ಬರುತ್ತಿದ್ದಾಗ ಆರೋಪಿತರು ಲಕ್ಷ್ಮಣ ಹಾರ್ಡ್ ವೇರ್ ಹತ್ತಿರ ಬಾಯಿಗೆ ಬಂದಂತೆ ಬೈದು ಜಗಳ ಮಾಡಿರುತ್ತಾರೆ. ಆರೋಪಿತರು ಹಲ್ಕ ಸೂಳೆಮಗನೇ ಎಂದು ಬೈದಿರುತ್ತಾರೆ. ಆಗ ನಾನು ಮತ್ತು ಚಾಸಾ-6 ರವರು ಜಗಳವನ್ನು ಬಿಡಿಸಿರುತ್ತೇವೆ. ಸುಮಾರು 20 ಅಡಿ ಗೋಡೆಯನ್ನು ಕೆಡವಿರುತ್ತಾರೆ. ಅದರಿಂದ ಸುಮಾರು 20,000/- ರೂ. ನಷ್ಟ ಉಂಟಾಗಿರುತ್ತದೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ .

**(2 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆತನನ್ನು ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಅಂತ 2 ನೇ ಆರೋಪಿ ಪರ ವಕೀಲರು ಸಮ್ಮತಿಸಿರುತ್ತಾರೆ. )**

**ಪಾಟೀ ಸವಾಲುಃ ಶ್ರೀ   ಆರ್ ಎಸ್ ಎಂ .,   ಆರೋಪಿ ಪರ ವಕೀಲರಿಂದಃ**

ನಾನು ಸುಮಾರು 32 ವರ್ಷದಿಂದ ಚಾಸಾ-1 ರವ ರ ಅಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಚಾಸಾ-1 ರವರೊಂದಿಗೆ ವಿಶ್ವಾಸದಿಂದ ಇರುತ್ತೇನೆ. ಕೃತ್ಯ ನಡೆದಿದೆ ಎನ್ನಲಾದ ದಿನದ ದಿನಾಂಕ, ತಿಂಗಳು ಮತ್ತು ವರ್ಷ ವನ್ನು ಹೇಳಲು ಆಗುವುದಿಲ್ಲ. ಗೋಡೆ ಕೆಡವಿರುವುದನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಸದರಿ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿರುವುದಿಲ್ಲ. ಜೆ ಸಿ ಬಿಯ ನೊಂದಣಿ ಸಂಖ್ಯೆ ಹಾಗೂ ಡ್ರೈವರ್ ಹೆಸರನ್ನು ಹೇಳಲು ಆಗುವುದಿಲ್ಲ. ರೈಟರ್ ರವರು ಚಾಸಾ-1 ರವರಿಗೆ ಕರೆ ಮಾಡಿದ ಮೊಬೈಲ್ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ. ಚಾಸಾ-1 ಮತ್ತು 4 ರವರು ಬರುತ್ತಿದ್ದ ಬೈಕಿನ ನಂಬರನ್ನು ಹೇಳಲು ಆಗುವುದಿಲ್ಲ. ಗಲಾಟೆಯಾಗಿದೆ ಎನ್ನಲಾದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಲಕ್ಷಣ ಹಾರ್ಡ್ ವೇರ್ ಹತ್ತಿರ ಆರೋಪಿತರು ಚಾಸಾ-1 ಮತ್ತು 4 ರವರನ್ನು ತಡೆದು ಬಾಯಿಗೆ ಬಂದಂತೆ ಬೈದಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನಾನು ಮತು ಚಾಸಾ-6 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. 20 ಅಡಿ ಗೋಡೆಯನ್ನು ಕೆಡವಿದ್ದರಿಂದ ರೂ. 20,000/- ನಷ್ಟ ಉಂಟಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ಚಾಸಾ-1 ಮತ್ತು ಆರೋಪಿತರ ನಡುವೆ ಖಾಲಿ ಜಾಗದ ವಿಚಾರವಾಗಿ ಸಿವಿಲ್ ವ್ಯಾಜ್ಯ ಇರುತ್ತದೆ ಎಂದರೆ ಸರಿ. ಚಾಸಾ-1 ರವರ ವಿರುದ್ದ 1 ನೇ ಆರೋಪಿಯು ನಿರ್ಬಂಧಕಾಜ್ಞೆ ಆದೇಶವನ್ನು ಪಡದಿರುತ್ತಾರೆ ಎಂದರೆ ಸರಿ. ಸಿವಿಲ್ ವ್ಯಾಜ್ಯದಿಂದಾಗಿ 1 ನೇ ಆರೋಪಿ ಮತ್ತು ಚಾಸಾ-1 ರವರ ನಡುವೆ ದ್ವೇಷ ಇರುತ್ತದೆ ಎಂದರೆ ಸರಿ. ನಿರ್ಬಂಧಕಾಜ್ಞೆ ಉಲ್ಲಂಘಸಿ ಗೋಡೆ ಕೆಡವಿದ್ದರಿಂದ ಚಾಸಾ-1 ರವರ ವಿರುದ್ದ 1 ನೇ ಆರೋಪಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಚಾಸಾ-1 ರವರ ವಿರುದ್ದ ಚಳ್ಳಕೆರೆಯಲ್ಲಿ ಠಾಣೆಯಲ್ಲಿ ದೂರು ದಾಖಲಿಸಿದದರಿಂದ ಚಾಸಾ-1 ರವರು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

ಹೇಳಿಕೆ ನೀಡಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ನಾನು ಚಸಾ-1 ರವರ ಕೈ ಕೆಳಗೆ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ